2240 (2926) – ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ): ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸುವವರೇ ?

ಅ) ರಾಜ್ಯದಲ್ಲಿ ಯಾವ ಯಾವ ಅರಣ್ಯ ಪ್ರದೇಶಗಳಿಗೆ ಬೆಂಕಿ ತಗುಲಿದೆ;

ಆ) ವನ್ಯಮೃಗಗಳ ಮತ್ತು ಅರಣ್ಯ ಪ್ರದೇಶಗಳು ಎಷ್ಟು ಪ್ರಮಾಣದಲ್ಲಿ ನಾಶವಾಗಿದೆ ;

ಇ) ಬೆಂಕಿಯನ್ನು ತಡೆಗಟ್ಟಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ?

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು)–

ಅ) ಅರಣ್ಯ ಪ್ರದೇಶಗಳಲ್ಲಿ ಪ್ರತಿ ವರ್ಷವೂ ವಿವಿಧ ಕಾರಣಗಳಿಂದ ನೆಲಮಟ್ಟದಲ್ಲಿ ಬೆಂಕಿ ತಗಲುವುದು ಸರ್ವೇ ಸಾಮಾನ್ಯವಾಗಿರುತ್ತದೆ. ವಿವಿಧ ವಿಭಾಗಳಲ್ಲಿ ಅರಣ್ಯ ಪ್ರದೇಶಗಳಿಗೆ ಬೆಂಕಿ ಪಸರಿಸುವ ವಿವರಗಳನ್ನು ಅನುಬಂಧ–I ರಲ್ಲಿ ಕೊಡಲಾಗಿದೆ.

ಆ) ನೆಲಮಟ್ಟ ಬೆಂಕಿ ತಗುಲಿರುವುದರಿಂದ ಯಾವುದೇ ವನ್ಯಮೃಗಗಳಾಗಲೀ ಅಥವಾ ಅರಣ್ಯ ಪ್ರದೇಶಗಳಾಗಲೀ ನಾಶವಾಗಿರುವುದಿಲ್ಲ.

ಇ) ಅರಣ್ಯ ಬೆಂಕಿ ನಿಗ್ರಹಿಸಲು ಪೂರ್ವಭಾವಿ ಕ್ರಮಗಳಾದ ಬೆಂಕಿರೇಖೆ ರೂಪಿಸಿ ನಿರ್ವಹಿಸುವುದು, ಬೆಂಕಿ ಕಾಲದಲ್ಲಿ ಬೆಂಕಿ ವೀಕ್ಷಕರನ್ನು ನೇಮಿಸುವುದು ಹಾಗೂ ಸೂಕ್ಷ್ಮ ಅರಣ್ಯ ಪ್ರದೇಶದಲ್ಲಿ ಬೆಂಕಿ ರಕ್ಷಣಾ ಶಿಬಿರಗಳನ್ನು ಸ್ಥಾಪಿಸಿ ಸಿಬ್ಬಂದಿಯನ್ನು ನಿಯೋಜಿಸುವುದು, ಬೆಂಕಿ ನಿಗ್ರಹ ಸಾಧನ ಸಾಮಗ್ರಿಗಳನ್ನು ಪೂರೈಸುವುದು ಇತ್ಯಾದಿ ಕ್ರಮಗಳನ್ನು ಕೈಗೊಳ್ಳಲಾಗಿದೆ. ಇದಲ್ಲದೆ ಗ್ರಾಮ ಅರಣ್ಯ ಸಮಿತಿಗಳನ್ನು ಅರಣ್ಯ ಬೆಂಕಿ ನಂದಿಸಲು ತೊಡಗಿಸಲು ಕ್ರಮ ಕೈಗೊಳ್ಳಲಾಗಿದೆ.

ಪ್ರಸಕ್ತ ಸಾಲಿನಿಂದ ವಾಸ್ತವಿಕ ಕಾಲಾಂಶದ ಬೆಂಕಿ ಮಾಹಿತಿಯನ್ನು FSI, (Forest Survey if India) KSRSAC (Karnataka State Remote Sensing Application Center) ಬಾಹ್ಯಾಕಾಶಾ ಇಲಾಖೆ, ಬೆಂಗಳೂರುರವರ ಸಹಯೋಗದಿಂದ ದೂರ ಸಂವೇದಿ ಉಪಗ್ರಹದ ಮೂಲಕ ರಾಜ್ಯದ ಅರಣ್ಯ ಪ್ರದೇಶಗಳಲ್ಲಿ ಬೆಂಕಿ ಕಾಣಿಸಿಕೊಂಡಿರುವ ಮಾಹಿತಿಯನ್ನು ಆಯಾ

ದಿವಸಗಳಲ್ಲಿ ತಿಳಿದುಕೊಳ್ಳಲಾಗುತ್ತಿದೆ. ಹಾಗೂ ಈ ಮಾಹಿತಿಯನ್ನು ತಕ್ಷಣವೇ ಬೆಂಕಿ ಕಾಣಿಸಿಕೊಂಡಿರುವ ಸಂಬಂಧಿಸಿದ ವಿಭಾಗದ ಉಪ ಅರಣ್ಯ ಸಂರಕ್ಷಣಾಧಿಕಾರಿಗಳಿಗೆ ರವಾನಿಸಲು ವ್ಯವಸ್ಥೆ ಮಾಡಲಾಗಿದೆ. ಇದರಿಂದ ಬೆಂಕಿ ಬೀಳುವುದನ್ನು ಕಡಿಮೆ ಮಾಡಲು ಸಹಾಯವಾಗುತ್ತದೆ.

ಅನುಬಂಧ–1

ಕ್ರ.ಸಂ ಹೆಸರು	ವೃತ್ತದ ಹೆಸರು	ವಿಭಾಗದ ಹೆಸರು	ಕಾದಿರಿಸಿದ ಅರಣ್ಯ ಪ್ರದೇಶದ
1	ಧಾರವಾಡ	ಧಾರವಾಡ	1. ವಡ್ನಾಳ್ 2. ಕೊಡಲಗಿ 3. ಕಾರ್ಗೋಡು 4. ಅರವಲಗಿ 5. ಚಿಕ್ಕವಾಡಗಟ್ಟಿ 6. ಕಪ್ಪಡಗುಡ್ಡ 7. ಚಂಬಳ
2	ಚಿಕ್ಕಮಗಳೂರು	ಚಿಕ್ಕಮಗಳೂರು	1 ಚಿಕ್ಕಮಗಳೂರು ವೃತ್ತದ ವಿಭಾಗಗಳ ಕೊಪ್ಪ ವ್ಯಾಪ್ತಿಯ ಅರಣ್ಯಗಳ ಬೆಂಕಿಯಿಂದ ಅಡಿಕಾಡುಸುಟ್ಟು ಹೋಗಿರುತ್ತದೆ
3	ಬೆಳಗಾಂ	ಬೆಳಗಾಂ	1. ದೇಶಮುರು 2. ಶಾದಿಗಾಳಿ 3. ಮರಿದುರ್ಗ 4. ಮಂಡಳ್ 5. ಗುಂಜಿ 6. ಲಾಸ್‌ಪೋಲಿ 7. ಗಾವಳಿ 8. ಲೋಂಡಾ
4	ಶಿವಮೊಗ್ಗ	ಭದ್ರಾವತಿ	1. ಉಬ್ರಾಣಿ 2. ಗುಂಡುಗಾವನ್ ಕಲ್ಲು 3. ದುರ್ಗದಬಸವನಪುರ 4. ಕುಮಾರನಹಳ್ಳಿ 5. ಭದ್ರಾಪುರ 6. ಕಾಕನಹೊಸುಡಿ 7. ಆದಿಕೆರೆ 8. ಆಗುಂಬೆ 9. ಎಡೂರು ಮುಡುಂಬಿ 10. ಅನಿತಾ ನೆಡೆತೋಪು 11.ಅರಸಾಳುತೇಗ ನೆಡುತೋಪು 12.ಬಸವನಪುರಮನ್ನಾ ಜಂಗಲಿ 13. ಹೊಳಲೂರು
5		ಸಾಗರ	1. ಗುಡ್ಡಕೊಪ್ಪ

			2. ಉಡುರಿ
			3. ಬಳ್ಳೂರು
			4. ಕಾಗಿಂದೆ
			5. ಹುಲುಗಿನಟ್ಟಿ
			6. ಕಿಲಡೂರು
			7. ಚಂದ್ರಕಲಾ
6	ಕೆನರಾ	ಹಳಿಯಾಳ	1. 70 ಹೆಕ್ಟೇರ್
		ಯಲ್ಲಾಪುರ	1. 1330 ಹೆಕ್ಟೇರ್
		ಹೊನ್ನಾವರ	1. 86.60 ಹೆಕ್ಟೇರ್
		ದಾಂಡೇಲಿ ವನ್ಯಜೀವಿ	1. 11 ಹೆಕ್ಟೇರ್
7	ಮೈಸೂರು	ಮೈಸೂರು	1. ಚಾಮುಂಡಿ ಬೆಟ್ಟ
			2. ಮಳವಳ್ಳಿ
		ಮಂಡ್ಯ	1. ಶ್ರೀರಂಗಪಟ್ಟಣ
			2. ನಾಗಮಂಗಲ ತಾಲ್ಲೂಕು
8	ಬಳ್ಳಾರಿ	ಚಿತ್ರದುರ್ಗ	1. ಜೋಗಿಮಟ್ಟಿ
			2. ಮಾರಿಕಣಿವೆ
			3. ಸ್ವರ್ಣಮುಖಿ
		ಬಳ್ಳಾರಿ	1. NF Block
			2. RM Block
			3. SM Block
			4. DM Block
			5. ಗುಂಡಾ ಕಾದಿರಿಸಿದ ಅರಣ್ಯ
			6. ಕುಮಾರಸ್ವಾಮಿ
9	ಗುಲ್ಬರ್ಗಾ	ಗುಲ್ಬರ್ಗಾ	1. ಅತ್ತಿಕಣಿ
			2. ಮೊಟ್ಟನಹಳ್ಳಿ
		ರಾಯಚೂರು	1. ಜಗಲಿಬೆಟ್ಟ
10	ಕೊಡಗು	ಮಡಿಕೇರಿ	1. 35 ಹೆಕ್ಟೇರ್
		ವಿರಾಜಪೇಟೆ	1. 99 ಹೆಕ್ಟೇರ್
11	ಮಂಗಳೂರು	ಕುಂದಾಪುರ	1. ಸುರ್ಟಿ
			2. ಬೋರೆಗುಂಡಿ
		ಕಾರ್ಕಳ ವನ್ಯಜೀವಿ ಪ್ರದೇಶದಲ್ಲಿ	1.ಕುದುರೆಮುಖ ಹುಲ್ಲುಗಾವಲು